# ಓದುವ ಖುಷಿ ನೀಡುವ ಯಾಂತ್ರಿಕವಲ್ಲದ ಪ್ರಾಯೋಗಿಕ ವಿಮರ್ಶೆ



ರಾಜೇಂದ್ರ ಚೆನ್ನಿ

ಅನನ್ಯ ಕ್ರಿಯಾಶೀಲ ಪ್ರತಿಭೆಯ ರಘುನಂದನ ಅವರು ಇತ್ತೀಚೆಗೆ ಪ್ರಕಟಿಸಿದ ಎರಡು ಪುಸ್ತಕಗಳಲ್ಲಿ ಒಂದು, 'ತುಯ್ತವೆಲ್ಲ ನವ್ಯದತ್ತ: ಅಂದತ್ತರ ಉಯ್ಯಾಲೆ... ಮತ್ತು ಅದರ ಸುತ್ತ' ಎನ್ನುವ ವಿಶಿಷ್ಟವಾದ ಕೃತಿ. ಈ ಕೃತಿಯು ಏಕಕಾಲಕ್ಕೆ ಸಾಹಿತ್ಯ ವಿಮರ್ಶೆ, ಕನ್ನಡ ನವೋದಯ ಹಾಗೂ ನವ್ಯ ಕಾವ್ಯದ ಬಗೆಗಿನ ಸಾಹಿತ್ಯಿಕ-ಚಾರಿತ್ರಿಕ ವ್ಯಾಖ್ಯಾನ ಹಾಗೂ ವಿಸ್ತಾರವಾದ ಲೋಕಮೀಮಾಂಸೆಯನ್ನು ಒಳಗೊಂಡ ಕೃತಿಯಾಗಿದೆ. ಅಲ್ಲದೇ ಈ ಲೋಕ ಮೀಮಾಂಸೆಯು ಕಾವ್ಯಮೀಮಾಂಸೆ ಹಾಗೂ ಆಳವಾದ ತಾತ್ವಿಕ ಚಿಂತನೆಯನ್ನು ಒಟ್ಟುಗೂಡಿಸುತ್ತದೆ. ಜೊತೆಗೆ ಸೂಕ್ಷ್ಮವಾಗಿ ಸಮಕಾಲೀನ ಸಾಮಾಜಿಕ-ರಾಜಕೀಯ ಪ್ರಜ್ಞೆಯ ಬಗ್ಗೆ ಟಿಪ್ಪಣಿಗಳನ್ನು ಮಾಡುತ್ತದೆ. ವಿಶೇಷವೆಂದರೆ, ಈ ಪ್ರಮಾಣದ ಸಂಕೀರ್ಣ ವಿಷಯಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಈ ಕೃತಿ ನಿರೂಪಣೆಯಲ್ಲಿ, ವಾದ ಮಂಡನೆಯಲ್ಲಿ ಚಿಂತನೆಯ ಅಭಿವ್ಯಕ್ತಿಯಲ್ಲಿ ನಿರುಮ್ಮಳವಾಗಿದೆ, ಸೊಗಸಾಗಿದೆ ಹಾಗೂ ಆತ್ಮೀಯ ಸಂಭಾಷಣೆಯಂತಿದೆ.

ಇಡೀ ಕೃತಿಯು ಓದುಗರೊಂದಿಗೆ ಸಂಭಾಷಣೆಯನ್ನು ಅಪೇಕ್ಷಿಸುತ್ತದೆ. ಆದಷ್ಟು ಕ್ಲಿಷ್ಟವಾದ ಪಾರಿಭಾಷಿಕಗಳನ್ನು ಹೊರಗಿಟ್ಟು ಸರಳವಾಗಿ ವಿಷಯ ಮಂಡನೆಯನ್ನು ಮಾಡುತ್ತದೆ. ರಘುನಂದನ ಅವರಿಗೆ ವಿಮರ್ಶೆಯಲ್ಲಿ ಸಾಂಪ್ರದಾಯಿಕವಾಗಿರುವ ಬರಹಗಾರನ ಗೈರುಹಾಜರಿಯಲ್ಲಿ ನಂಬಿಕೆ ಇಲ್ಲ. ಹೀಗಾಗಿ ಅವರು ಅಲ್ಲಲ್ಲಿ ಓದುಗರನ್ನು ಮಾತನಾಡಿಸುತ್ತ, ತಮ್ಮ ನಂಬಿಕೆಗಳನ್ನು